ಕೆ.ಸಿ.ಡಿ. ಸಮಾಚಾರ

ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

KCD JOURNALISM CLUB DHARWAD

ಕರ್ನಾಟಕ ಮಹಾವಿದ್ಯಾಲಯ ಧಾರವಾಡ 100 Years Centenary Celebration 2017-18 KARNATAK COLLEGE DHARWAD

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ:13 ಸಂಪುಟ:3 ಪುಟ:2

@KACD100 @Ksamachar Readers can view at Kcd2017.blogspot.in


## ಬೆಳಕು

ಕತ್ತಲಿನಲ್ಲಿ ನಮ್ಮ ನೆರಳೇ ನಮ್ಮನ್ನು ತೊರೆಯುತ್ತದೆ. ಆದ್ದರಿಂದ ಬದುಕಿನಲ್ಲಿ ಯಾರ ಮೇಲೂ ಬಹಳ ಅವಲಂಬಿರಾಗಬಾರದು. ಸ್ವಾವಲಂಬಿಗಳಾಗೋಣ.

_ ಅನಾಮಿಕ.

## Unbelievable facts.

**East or West, India is the best**

Around the 17th century, India was one of the richest countries in the world.

Today, India is the world's third largest economy.

India is one of the only three countries that makes super-computers (the US and Japan are the other two).

The world's largest road net-work is in India—over 1.9 million miles of roads cover the country.

India has the largest amount of vegetarians in the world.

So much so that Pizza Hut had to open their first pure vegetarian restaurant in the country.

And KFC had to introduce a "vegetarian" menu for India.

And so did McDonalds, the world's largest fast-food manufacturer.

Chai is India's national drink.

India grows 1.2 million tons of mangoes every year, weight equivalent to 80,000 blue whales.

The state of Meghalaya is the wettest inhabited place of earth.

India gave the world Yoga, that has existed for more than 5,000 years.

May 26 is celebrated as the Science Day in Switzerland in honour of former President Dr. APJ Abdul Kalam, because on the day, Kalam visited the country :)

Martial Arts was first created in India.

The world's biggest family lives in India. One man, 39 wives and 94 children.

India is the world's largest importer of arms.

# "ಶುದ್ಧ ಕುಡಿಯವ ನೀರಿನ ಘಟಕ ಉದ್ಘಾಟನೆ"




ಕರ್ನಾಟಕ ಕಲಾ ಮಹಾವಿದ್ಯಾಲಯದ ಆವರಣದಲ್ಲಿ ಕರ್ನಾಟಕ ಸಂಸತ್ ಸದ್ಯಸರು ವಿಧಾನ ಪರಿಷತ್ ಸದಸ್ಯರು ಮತ್ತು ಹುಡಾ ಅಧ್ಯಕ್ಷರು ಇವರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ನಿರ್ಮಿಸಿದ ಕೊಳವೆ ಭಾವಿ, ಶುದ್ಧ ಕುಡಿಯವ ನೀರಿನ ಘಟಕವನ್ನು ಧಾರವಾಡ ಜಿಲ್ಲಾ ಲೋಕಸಭೆಯ ಸಂಸದರಾದ ಪ್ರಲ್ಹಾದ ಜೋಶಿ ಉದ್ಘಾಟಿಸಿದರು. ಚಿತ್ರದಲ್ಲಿ ಡಾ ಎಸ್ ಎಸ್ ಕಟ್ಟಿಮನಿ, ಡಾ. ರಾಜೇಶ್ವರಿ ಮಹೇಶ್ವರಯ್ಯ ಸಂಸದ ಪ್ರಲ್ಹಾದ ಜೋಶಿ, ಕವಿವಿ ಕುಲಪತಿ ಪ್ರೊ. ಪ್ರಮೋದ ಗಾಯಿ, ವಿಧಾನ ಪರಿಷತ ಸದಸ್ಯ ಪ್ರದೀಪ ಶೆಟ್ಟರ್ ಮತ್ತು ಇತರರು

ಕರ್ನಾಟಕ ಕಲಾ ಮಹಾವಿದ್ಯಾಲಯದ ಆವರಣದಲ್ಲಿ ಕರ್ನಾಟಕ ಸಂಸತ್ ಸದ್ಯಸರು ವಿಧಾನ ಪರಿಷತ್ ಸದಸ್ಯರು ಮತ್ತು ಹುಡಾ ಅಧ್ಯಕ್ಷರು ಇವರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ನಿರ್ಮಿಸಿದ ಕೊಳವೆ ಭಾವಿ, ಶುದ್ಧ ಕುಡಿಯವ ನೀರಿನ ಘಟಕವನ್ನು ಧಾರವಾಡ ಜಿಲ್ಲಾ ಲೋಕಸಭೆಯ ಸಂಸದರಾದ ಪ್ರಲ್ಹಾದ ಜೋಶಿ ಉದ್ಘಾಟಿಸಿದರು.

ಪಶ್ಚಿಮ ಮತ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಎಸ್.ವಿ ಸಂಕನೂರ ಅನುದಾನ ಅಡಿಯಲ್ಲಿ ಕರ್ನಾಟಕ ಕಾಲೇಜಿನ ವಿ.ಕೃ ಗೋಕಾಕ ಗ್ರಂಥಾಲಯದ ಎದುರು ನಿರ್ಮಿಸಲಾದ ಶುದ್ಧ ಕುಡಿಯುವ ನೀರಿನ ಘಟಕ ಮತ್ತು ಧಾರವಾಡ ಜಿಲ್ಲಾಸಂಸದರ ಪ್ರದೇಶ ಅಭಿವೃದ್ಧಿಯ ಅನುದಾನ ಅಡಿಯಲ್ಲಿ ಕೊಳವೆ ಭಾವಿಯನ್ನು ಮಂಜೂರು ಮಾಡಲಾಗಿ-ತ್ತು. ಇದೇ ಸಂದರ್ಭದಲ್ಲಿ ಹುಬ್ಬಳ್ಳಿ ಧಾರವಾಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕ್ಯಾಂಪಸ್ ನಲ್ಲಿ ಅಳವಡಿಸಿಲಾದ ಮಿನಿ ಮೂರು ದೀಪಗಳನ್ನು ಹೈಮಾಸ್ಕ ದೀಪವನ್ನು ಹುಡಾ ಅಧ್ಯಕ್ಷ ಅನ್ವರ ಮುಧೊಳ ಅವರು ಲೋಕಾರ್ಪಣೆಗೊಳಿಸಿದರು.

ಈ ಕಾರ್ಯಕ್ರಮದಲ್ಲಿ ವಿಧಾನ ಪರಿಷತ ಸದಸ್ಯರಾದ ಪ್ರದೀಪ ಶೆಟ್ಟರ್, ಕರ್ನಾಟಕ ವಿಶ್ವವಿದ್ಯಾಲಯಂದ ಕುಲಪತಿಗಳಾದ ಪ್ರೊ. ಪ್ರಮೋದ ಗಾಯಿ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರಾದ ವಿಜಯಾನಂದ ಶೆಟ್ಟಿ, ಹುಬ್ಬಳ್ಳಿ ಧಾರವಡದ ಪಶ್ಚಿಮ ಕ್ಷೇತ್ರದ ಬಿಜೆಪಿ ಕಾರ್ಯದರ್ಶಿ ಅರವಿಂದ ಆಲದಕಟ್ಟಿ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ, ಸಿ.ಎಫ್ ಮೂಲಿಮನಿ ಹಾಗೂ ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಹಾಜರಿದ್ದರು. ಹುಡಾ ಅಧ್ಯಕ್ಷ ಅನ್ವರ ಮುಧೊಳ ಮತ್ತು ಸಂಸದರಾದ ಪ್ರಲ್ಹಾದ ಜೋಶಿ ಅವರಿಗೆ ಕವಿವಿ ಕುಲಪತಿ ಪ್ರೊ. ಪ್ರಮೋದ ಗಾಯಿ ಸನ್ಮಾನಿಸಿದರು.

ಇದೇ ಮೇ 31 ರಂದು ನಿವೃತ್ತಿ ಹೊಂದುತ್ತಿರುವ ಕರ್ನಾಟ ಕಾಲೇಜಿನ ಪ್ರಾಚಾರ್ಯ-ರಿಗೆ ಪ್ರಲ್ಹಾದ ಜೋಶಿ ಸನ್ಮಾನಿಸಿದರು. ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಎಸ್ ಆರ್ ಗಣಿ ಡಾ ಬಿ.ಎಸ್ ಭಜಂತ್ರಿ, ಪ್ರೊ. ಎ.ಎಸ್. ಐನಾಪೂರ, ಡಾ. ಎಂ ಬಿ ದಳಪತಿ ಮತ್ತು ಕವಿವಿ ಬಸವನಾಳ ಗ್ರಂಥ-ಾಲಯದ ಮುಖ್ಯ ಗ್ರಂಥಪಾಲಕ ಪ್ರೊ ಎಸ್ ಎ ಪಾಡೀಲ್, ವಿ.ಕೃ ಗೋಕಾಕ ಗ್ರಂಥಾಲಯದ ಸಿಬ್ಬಂದಿ, ನೀರಾವರಿ ಘಟಕ ಮಂಡಳಿಯ ಅಧಿಕಾರಿಗಳು ಹಾಜರಿದ್ದರು.

_ರೋಹಿಣಿ.
(4ನೇ ಸೆಮಿಸ್ಟರ್)

# ಕೆ.ಸಿ.ಡಿ ಯ ಪ್ರಾಚಾರ್ಯರಾಗಿ ಡಾ. ರಾಜೇಶ್ವರಿ ಮಹೇಶ್ವರಯ್ಯ ಅಧಿಕಾರ ಸ್ವೀಕಾರ




ಕರ್ನಾಟಕ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಡಾ ರಾಜೇಶ್ವರಿ ಮಹೇಶ್ವರಯ್ಯ ಅವರು ಡಾ ಎಸ್ ಎಸ್ ಕಟ್ಟಿಮನಿ ಅವರಿಂದ ಅಧಿಕಾರ ಸ್ವಿಕರಿಸುತ್ತಿರವದು.

ಉತ್ತರ ಕರ್ನಾಟಕದ ಪ್ರತಿಷ್ಠಿತ ಮಹಾವಿದ್ಯಾಲಯ ಎನಿಸಿರುವ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಡಾ. ರಾಜೇಶ್ವರಿ ಮಹೇಶ್ವರಯ್ಯ ಮೇ 31 ಅಧಿಕಾರವನ್ನು ಸ್ವೀಕರಿಸಿದರು. ಪ್ರಸ್ತುತ ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ ಎಸ್ ಎಸ್ ಕಟ್ಟಿಮನಿ ಅವರು ಸಂಜೆ 4:00 ಗಂಟೆಗೆ ಡಾ ರಾಜೇಶ್ವರಿ ಮಹೇಶ್ವರಯ್ಯ ಅವರಿಗೆ ಅಧಿಕಾರ ಹಸ್ತಾತಂತ-ರಿಸಿದರು. ಪ್ರಾಚಾರ್ಯ ಡಾ ಎಸ್ ಎಸ್ ಕಟ್ಟಿಮನಿ ಅವರು ಮೇ 31 ರಂದು ನಿವೃತ್ತಿ ಹೊಂದಿದ್ದಾರೆ. ಡಾ ರಾಜೇಶ್ವರಿ ಮಹೇಶ್ವರಯ್ಯ ಅವರು ಪ್ರಸ್ತುತ ಕರ್ನಾಟಕ ಕಲಾ ಮಹಾವಿದ್ಯಾಲಯದ ಉಪ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿದ್ದರು. ಕರ್ನಾಟಕ ವಿಶ್ವವಿದ್ಯಾಲಯ ಕುಲಪತಿಗಳ ಆದೇಶದ ಮೇರೆಗೆ ಡಾ ರಾಜೇಶ್ವರಿ ಮಹೇಶ್ವರಯ್ಯ ಅವರು ಅಧಿಕಾರ ಸ್ವಿಕರಿಸಿದರು. ಡಾ ರಾಜೇಶ್ವರಿ ಮಹೇಶ್ವರಯ್ಯ ಅವರು ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾಗಿ ಅವರು ಭಾಷಾ ವಿಜ್ಞಾನ ಮತ್ತು ಕನ್ನಡ ವಿಷಯದಲ್ಲಿ ವಿಶೇಷತೆಯನ್ನು ಹೊಂದಿದ್ದಾರೆ.

ಈ ಅಧಿಕಾರ ಹಸ್ತಾಂತರ ಕಾರ್ಯಕ್ರಮದಲ್ಲಿ ಕಲಬುರ್ಗಿ ಕೇಂದ್ರಿಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎಚ್ ಎಮ್ ಮಹೇಶ್ವರಯ್ಯ ವಿಶ್ರಾಂತ ಪ್ರಾಚಾರ್ಯರಾದ ಉಷಾಮೂರ್ತಿ, ವೀಣಾ ಶಾಂತೇಶ್ವರ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಸಿ.ಎಫ್ ಮೂಲಿಮನಿ ಮತ್ತು ಶಿಕ್ಷಕರ ಶಿಕ್ಷಕೇತರ ಸಿಬ್ಬಂದಿ ಹಾಜರಿದ್ದರು.

_ಸ್ವಾತಿ
(4ನೇ ಸೆಮಿಸ್ಟರ್)

## ವಿದ್ಯಾರ್ಥಿಗಳ ಕಠಿಣ ಪರಿಶ್ರಮ ಮತ್ತು ಅಧ್ಯಯನದಿಂದ ತಾನು ಕಲಿತ ಕಾಲೇಜಿಗೆ ಮತ್ತು ತಮ್ಮ ತಂದೆ ತಾಯಿಗಳಿಗೆ ಕೀರ್ತಿ: ಡಾ.ವಿ.ಸಿ.ಐರಸಂಗ



ಚಿತ್ರದಲ್ಲಿ ಸಾಹಿತಿ, ಡಾ ವಿ.ಸಿ ಐರಸಂಗ ಮಾತನಾಡುತ್ತಿರುವದು. ಡಾ.ಬಿ. ಎಸ್ ಭಜಂತ್ರಿ,ಡಾ ರಾಜೇಶ್ವರಿ ಮಹೇಶ್ವರಯ್ಯ, ಡಾ ಎಸ್ ಎಸ್ ಕಟ್ಟಿಮನಿ, ಡಾ ಮಹಾದೇವಿ ಹಿರೇಮಠ ಹಾಗೂ ವಿದ್ಯಾರ್ಥಿ ಕಾರ್ಯದರ್ಶಿಗಳು ಇದ್ದಾರೆ.

ವಿದ್ಯಾರ್ಥಿಗಳು ಸರಿಯಾದ ದಿಕ್ಕಿನಲ್ಲಿ ಕಠಿಣ ಪರಿಶ್ರಮ ಮತ್ತು ಅಧ್ಯಯನದಿಂದ ತಾನು ಕಲಿತ ಕಾಲೇಜಿಗೆ ಮತ್ತು ತಮ್ಮ ತಂದೆ ತಾಯಿಗಳಿಗೆ ಕೀರ್ತಿ ತರಬೇಕು ಎಂದು ಸಾಹಿತಿ, ಕವಿವಿ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾದ ಡಾ ವಿ.ಸಿ.ಐರಸಂಗ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೆನ್ ಸಭಾಂಗಣದಲ್ಲಿ 'ಕರ್ನಾಟಕ ಸಂಘ' ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಅ ಮತ್ತು ಬ ಘಟಕಗಳ ಆಶ್ರಯದಲ್ಲಿ ಹಮ್ಮಿಕೊಂಡ 2016-17ನೇ ಸಾಲಿನ ಕಾರ್ಯಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ನಾನು ಕರ್ನಾಟಕ ಕಲಾ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಮತ್ತು ನನ್ನ ಕಾಲೇಜಿನ ಅಂದಿನ ದಿನಗಳು ನನಗೆ ಮತ್ತೆ ಮರುಕಳಿಸುತ್ತಿವೆ ಎಂದು ತಮ್ಮ ಕಾಲೇಜಿನ ನೆನಪುಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡರು.

ಸಾಹಿತಿ ಡಾ.ವಿ.ಸಿ ಐರಸಂಗ ಅವರು ಕಾರ್ಯಕ್ರಮಕ್ಕೆ ಎಂದಿನಂತೆ ಸೈಕಲ್ ಮೇಲೆ ಬಂದು ಸೈಕಲ್ ಮೇಲೆ ತೆರಳಿದುದು ವಿಶೇಷವಾಗಿತ್ತು. ಅವರ ಈ ಸರಳತೆಯನ್ನು ಕಂಡು ಕಾಲೇಜಿನ ವಿದ್ಯಾರ್ಥಿಗಳು ಮೂಕ ವಿಸ್ಮಿತರಾದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕಲಾ ಮಹಾವಿದ್ಯಾಲಯದ ಉಪಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಕರ್ನಾಟಕ ಸಂಘ ಮತ್ತು ರಾಷ್ಟ್ರೀಯ ಸೇವಾಯೋಜನೆ ಉತ್ತಮವಾದ ಕಾರ್ಯಚಟುವಟಿಕೆಗಳು ಕಾಲೇಜಿಗೆ ಕೀರ್ತಿ ತಂದಿದ್ದು, ಕಾಲೇಜಿಗೆ ಎರಡು ಬಾರಿ ಉತ್ತಮ ಎನ್. ಎಸ್.ಎಸ್ ಘಟಕ ಮತ್ತು ಅಧಿಕಾರಿ ಎಂದು ಪ್ರಶಸ್ತಿ ಲಭಿಸಿದ್ದು, ಇದು ನಮ್ಮ ಕಾಲೇಜಿನ ಕಾರ್ಯದಕ್ಷತೆಯನ್ನು ಎತ್ತಿತೋರಿಸುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ ಎಸ್ ಎಸ್ ಕಟ್ಟಿಮನಿ ಮಾತನಾಡಿ ಎನ್ ಎಸ್ ಎಸ್ ಘಟಕವು ನನಗೆ ಅನೇಕ ಅವಕಾಶ ಮತ್ತು ಗೌರವವನ್ನು ತಂದು ಕೊಟ್ಟಿದೆ ಮತ್ತು ನನ್ನ ಅವಧಿಯಲ್ಲಿ ಎರಡು ಬಾರಿ ರಾಷ್ಟ್ರೀಯ ಸೇವಾ ಯೋಜನೆ (ಎನ್ ಎಸ್ ಎಸ್) ಉತ್ತಮ ಘಟಕ ಮತ್ತು ಅಧಿಕಾರ ಲಭಿಸಿದ್ದು ನನ್ನ ಭಾಗ್ಯ ಎಂದರು ಇದೆ ರೀತಿಯಾಗಿ ಮುಂಬರುವ ದಿನಗಳಲ್ಲಿ ಉತ್ತಮ ಕಾರ್ಯಚಟುವಟಿಕೆಗಳಿಂದ ಕರ್ನಾಟಕ ಕಾಲೇಜವು ರಾಷ್ಟ್ರಮಟ್ಟದಲ್ಲಿ ಬಿಂಬಿತವಾಗಲಿ ಎಂದು ಆಶಯ ವ್ಯಕ್ತಪಡಿಸಿದರು.

ಕರ್ನಾಟಕ ಕಲಾ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ ಎಮ್ ಆರ್ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿ ಕರ್ನಾಟಕ ಕಲಾ ಮಹಾವಿದ್ಯಾಲಯವು ಸುವರ್ಣಮಹೋತ್ಸವದ ಆಚರಣೆಯ ಸಂಭ್ರಮದಲ್ಲಿ ಇದ್ದು, ಇದು ತನ್ನದೇ ಆದ ಗತ ವೈಭವವನ್ನು ಹೊಂದಿದೆ ಎಂದು ಕರ್ನಾಟಕ ಕಲಾ ಮಹಾವಿದ್ಯಾಲಯದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ವತಿಯಿಂದ ಎನ್.ಎಸ್.ಎಸ್ ರಾಷ್ಟ್ರೀಯ ಭಾವೈಕತಾ ಶಿಬಿರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತ-ರಿಸಲಾಯಿತು. ಕಾರ್ಯಕ್ರಮದಲ್ಲಿ ಡಾ.ಶಶಿಕಲಾ ದಂಡಿಗಿಮಠ, ಡಾ.ಅರುಣಾ ಕಟ್ಟಿಮನಿ, ಡಾ ಬಸಮ್ಮ, ಡಾ ಶೈಲಜಾ ಅಮರಶೆಟ್ಟಿ ಉಪನ್ಯಾಸಕ ಸೋಮು ದೊಡಮನಿ, ಆನಂದ ಬಾರ್ಕಿ ಮತ್ತು ಕರ್ನಾಟಕ ಸಂಘದ ಮತ್ತು ಎನ್ ಎಸ್ ಎಸ್ ಘಟಕದ ಸ್ವಯಂ ಸೇವಕರು, ವಿದ್ಯಾರ್ಥಿ ಕಾರ್ಯದರ್ಶಿಗಳು ಹಾಜರಿದ್ದರು. ಎನ್ ಎಸ್ ಎಸ್ ಅಧಿಕಾರಿ ಡಾ ಬಿ.ಎಸ್.ಭಜಂತ್ರಿ ಅತಿಥಿಗಳನ್ನು ಸ್ವಾಗತಿಸಿದರು. ಶಿಲ್ಪಾ ಸತರೆಡ್ಡಿ, ನವೀನ ಎಲ್. ಕಾರ್ಯಕವನ್ನು ನಿರೂಪಿಸಿದರು. ಡಾ ವಾಮದೇವ ತಳವಾರ ವಂದಿಸಿದರು.

-ಚೈತ್ರ
(2ನೇ ಸೆಮಿಸ್ಟರ್)

## ಕರ್ನಾಟಕ ಮಹಾವಿದ್ಯಾಲಯದಲ್ಲಿ ಡಿಪ್ಲೊಮಾ ಹೊಟೆಲ್ ಅಧ್ಯಯನ ಆರಂಭ



ಉತ್ತರ ಕರ್ನಾಟಕದ ಹೆಮ್ಮೆಯ ಕರ್ನಾಟಕ ಮಹಾವಿದ್ಯಾಲಯವು ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಈ ಸಂಭ್ರಮದಲ್ಲಿ ಉದ್ಯೋಗಸೃಷ್ಟಿಗೆ ವರದಾನವಾಗಬಹುದಾದ ಒಂದು ವರ್ಷದ "ಡಿಪ್ಲೊಮಾ ಇನ್ ಹೊಟೆಲ್ ಅಂಡ್ ಹಾಸ್ಪಿಟಾಲಿಟಿ ಸರ್ವಿಸಸ್" (Diploma In Hotel and Hospitality Services) ಎಂಬ ಹೊಸ ಕೋರ್ಸನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರವಾಸೋದ್ಯಮ ಅಧ್ಯಯನ ವಿಭಾಗ (ಬಿಟಿಎ/ ಎಂಟಿಎ) ದಲ್ಲಿ ಇದೇ ಶೈಕ್ಷಣಿಕ ವರ್ಷದಿಂದ ಆರಂಭಿಸಲಾಗಿದೆ. ಇದು ಪಿಯುಸಿ ಪಾಸಾದ ವಿದ್ಯಾರ್ಥಿಗಳಿಗೆ ಮತ್ತು ನಿರುದ್ಯೋಗಿಗಳಿಗೆ ಉದ್ಯೋಗವಕಾಶ ಕಲ್ಪಿಸುವ ಮಹತ್ವದ ಕೋರ್ಸು ಕೂಡ ಆಗಿದೆ. ಇದು ಕವಿವಿಯಿಂದ ನೀಡಲ್ಪಡುವ ಡಿಪ್ಲೊಮಾ ಕೋರ್ಸು ಆಗಿದೆಯಲ್ಲದೇ ವಿಶ್ವವಿದ್ಯಾಲಯವೊಂದು ಹೊಟೆಲ್ ಉದ್ಯಮಕ್ಕೆ ಸಂಬಂಧಿಸಿದಂತೆ ನೀಡುವ ಪ್ರಥಮ ಕೋರ್ಸು ಕವಿವಿಯಿಂದ ಆರಂಭವಾಗಿರುವುದು ಹೆಮ್ಮೆಯ ಸಂಗತಿ. ಉತ್ತರ ಕರ್ನಾಟಕದ ಯುವಕರಿಗೆ ಇದು ಉದ್ಯೋಗ ಕಲ್ಪಿಸುವುದಲ್ಲದೆ ಹೆಚ್ಚು ವೃತ್ತಿಪರತೆ, ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು

ಈಗಾಗಲೇ ಕರ್ನಾಟಕ ಕಾಲೇಜ್ ಕ್ಯಾಂಪಸ್‌ನಲ್ಲಿ ಪ್ರವಾಸೋದ್ಯಮ ಅಧ್ಯಯನ ವಿಭಾಗದಲ್ಲಿ ಬಿಟಿಎ ಮತ್ತು ಎಂಟಿಎ ಎಂಬ ಸ್ನಾತಕ ಮತ್ತು ಸ್ನಾತಕೋತ್ತರ ಪ್ರವಾಸೋದ್ಯಮ ಪದವಿ ಕೋರ್ಸುಗಳು ಯಶಸ್ವಿಯಾಗಿ ನಡೆದಿದ್ದು ವಿದ್ಯಾರ್ಥಿಗಳು ಉದ್ಯೋಗ ಅವಕಾಶಗಳನ್ನು ಪಡೆದುಕೊಂಡಿದ್ದಾರೆ. ಈ ಕೋರ್ಸಿಗೆ ನಿಗದಿತ ಪ್ರವೇಶ ಶುಲ್ಕವು ಸಾಮಾನ್ಯ ವರ್ಗದವರಿಗೆ 18,000 ರೂಪಾಯಿಗಳು ಆಗಿದ್ದು, ಇತರೆ ಹಿಂದುಳಿದ ವರ್ಗಗಳಿಗೆ 17,100/- ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ 13,345 ರೂಪಾಯಿಗಳು ಎಂದು ಶುಲ್ಕವನ್ನು ನಿಗದಿ ಪಡಿಸಲಾಗಿದೆ. ಈಗಾಗಲೇ ಪದವಿ ಮತ್ತು ಸ್ನಾತ್ತಕೋತ್ತರ ಪದವಿ ಹಂತದಲ್ಲಿ ಅಧ್ಯಯನ ನಿರತ ವಿದ್ಯಾರ್ಥಿಗಳು ಸಹ ಪ್ರವೇಶ ಪಡೆಯಬಹುದಾಗಿದೆ. ಪ್ರಸ್ತುತ ಡಿಪ್ಲೊಮಾ ಕೋರ್ಸು ಒಂದು ವರ್ಷದ್ದಾಗಿದ್ದು ಅಲ್ಪಾವಧಿಯಲ್ಲಿಯೇ ಉದ್ಯೋಗ ಕಲ್ಪಿಸುವಲ್ಲಿ ಮಹತ್ವದ ಪಾತ್ರ ವಹಿಸಬಲ್ಲದಾಗಿದೆ ಮತ್ತು ಯುವಕರು ಇಂತಹ ಕೋರ್ಸುಗಳ ಸದ ುಪಯೋಗಪಡೆದುಕೊಳ್ಳಬೇಕೆಂದು ಕುಲಪತಿ ಪ್ರೊ. ಪ್ರಮೋದ ಗಾಯಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಪ್ರವಾಸೋದ್ಯಮ ಅಧ್ಯಯನ ವಿಭಾಗದ ಸಂಯೋಜಕರಾದ ಡಾ. ಕೆ. ಜಗದೀಶ್ ಅವರನ್ನು ಸಂಪರ್ಕಿಸಬಹುದಾಗಿದೆ.

ದೂರವಾಣಿ ಸಂಖ್ಯೆಗಳು 0836-2441655, 0836-2215344 ಮತ್ತು ಮೊಬೈಲ್ ಸಂಖ್ಯೆ: 9844667429

-ಶೃತಿ
(2ನೇ ಸೆಮಿಸ್ಟರ್)

### ಕರ್ನಾಟಕ ಕಲಾ ಮಹಾವಿದ್ಯಾಲಯದ 2017 ನೇ ಸಾಲಿನ ದ್ವಿತೀಯ ಪಿ.ಯು.ಸಿ ಕಲಾ ಮತ್ತು ವಾಣಿಜ್ಯ ವಿಭಾಗದ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಕೆ

**ಕಲಾ ವಿಭಾಗ**

1) ಕುಮಾರ ಹಿಂದುರಾಜ ಬಿಲಾನಾ
ಗಳಿಸಿದ ಅಂಕಗಳು 545 ಪ್ರತಿಶತ 91.33%



2) ಕುಮಾರ. ಸಾಗರ ಕುರಹಟ್ಟಿ
ಗಳಿಸಿದ ಅಂಕಗಳು 535 ಪ್ರತಿಶತ 89.16%



3) ಕುಮಾರಿ ಗೀತಾ ಚಿಕ್ಕಮನಿ
ಗಳಿಸಿದ ಅಂಕಗಳು 522 ಪ್ರತಿಶತ 87.00%



**ವಾಣಿಜ್ಯ ವಿಭಾಗ**

1) ಕುಮಾರಿ ಅನುಪಮಾ ಎಸ್ ನಿಡಗುಂದಿ
ಪ್ರತಿಶತ 91.00%



2) ಕುಮಾರಿ ಅಕ್ಷತಾ ಸವಸುದ್ದಿ
ಪ್ರತಿಶತ 88.83



3) ಕುಮಾರ ಪ್ರವೀಣ ಜೋಗಿನ್
ಪ್ರತಿಶತ 86.16%



ಕಲಾ ಮತ್ತು ವಾಣಿಜ್ಯ ವಿಭಾಗದ ದ್ವಿತೀಯ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಕಾಲೇಜಿನ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ಮತ್ತು ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಅವರು ಅಭಿನಂದಿಸಿದ್ದಾರೆ.

## ಕಾಡದಿರಿ

ಹಳೆಯ ನನ್ನ ನೆನಪುಗಳೆ
ಸುಮ್ಮನೇಕೆ ಕಾಡುವಿರಿ
ಗೋರಿಯಲ್ಲೆ ಮಲಗಿರಲಿ
ಮತ್ತೆ ನೆನೆಪ ತಾರದಿರಿ॥

ಒಂದು ಸಣ್ಣ ಮಾತಿನಿಂದ
ನಮ್ಮಿಬ್ಬರ ಸರಿಸಿದೆ
ಒಲವು ಮುದುಡಿ ನೋವು ಹರಡಿ
ನಿತ್ಯ ನೋವ ತರುತ್ತಿದೆ॥

ಉಕ್ಕಿದಂತ ಪ್ರೀತಿ ಮನದಿ
ಬತ್ತಿದ ಕೆರೆಯಾಗಿದೆ
ಪ್ರೀತಿ ತುಂಬಿದಂತ ಕಣ್ಣು
ಉರಿವ ಜ್ವಾಲೆಯಾಗಿದೆ॥

ಕಾಡದಿರಿ ನೆನಪುಗಳೆ
ತಾಳಲಾರೆ ಅವುಗಳ
ನೋವು ಬಳಲುತವತಿರುವೆ
ನೆನೆದು ನಿತ್ಯ ಅವುಗಳ॥

_ಕುಮಾರ್

ಗೌರವ ಸಂಪಾದಕರು: ಡಾ. ರಾಜೇಶ್ವರಿ ಮಹೇಶ್ವರಯ್ಯ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ. ರವೀಂದ್ರ ಜಲರೆಡ್ಡಿ, ವಿದ್ಯಾರ್ಥಿ ಸಂಪಾದಕರು: ,ನಿತಿನ್. ಪುಟ ವಿನ್ಯಾಸ: ಶ್ರೀಹರಿ.